**MVC-1598/2020** **ಆರ್.ಡಬ್ಲ್ಯೂ-2 (Prakash S.)**

ದಿನಾಂಕಃ **24.07.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : 3 ನೇ ಎದುರುದಾರರ ಪರ ಶ್ರೀ.ಎಸ್.ಸಿ.ಕೆ. ವಕೀಲರಿಂದಃ</u>**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

ಈ ಪ್ರಕರಣದಲ್ಲಿ ಹಾಜರಾಗಿ ಸಾಕ್ಷಿ ನುಡಿಯಲು ಕಂಪನಿಯಮರ ನೀಡಿದ ಅಧಿಕಾರ ಪತ್ರವನ್ನು **ನಿ.ಆರ್.2** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ವಜಾ ಮಾಡಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಟಿ.ಎನ್.ಎಸ್. ವಕೀಲರಿಂದಃ</u>**

ಕಡತಗಳ ಆಧಾರದ ಮೇರೆಗೆ ಪ್ರಮಾಣ ಪತ್ರಿಕೆ ಸಲ್ಲಿಸಿ ಸಾಕ್ಷಿ ನುಡಿಯುತ್ತಿದ್ದೇನೆ. ಮೃತ ಹೊಂದಿದವರು ಅಪಘಾತಪಡಿಸಿದ ವಾಹನದ ಮೂರನೇ ವ್ಯಕ್ತಿಯಾಗಿರುತ್ತಾರೆ. ಅಪಘಾತಕ್ಕೀಡು ಮಾಡಿದ ವಾಹನವು ಲಾಂಗ್ ಟರ್ಮ್ ವಿಮೆ ಪಾಲಿಸಿಯನ್ನು ಹೊಂದಿರುತ್ತದೆ ಎಂದರೆ ಸಾಕ್ಷಿ ದಾಖಲೆಗಳು ಹಾಗೆ ಕಾಣಿಸುತ್ತವೆ ಎಂದು ನುಡಿಯುತ್ತಾರೆ. ಸದರಿ ವಾಹನದ ಆರ್.ಸಿ. ರದ್ದತಿಯಾಗಿರುತ್ತದೆ ಎಂಬ ಮಾಹಿತಿಯನ್ನು ಕಳುಹಿಸಿಕೊಟ್ಟಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಂಸ್ಥೆಯವರು ಈ ಬಗ್ಗೆ ವಿಚಾರಿಸಲಾಗಿ ದಾಖಲಾತಿಗಳು ಲಭ್ಯವಿರುವುದಿಲ್ಲ ಎಂದು ಆರ್.ಟಿ.ಓ ಕಛೇರಿಯಿಂದ ಮೌಖಿಕವಾಗಿ ಮಾಹಿತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಆರ್.ಸಿ. ರದ್ದಾದ ಕುರಿತು ಪೋಲೀಸ್ ತನಿಖಾಧಿಕಾರಿಗಳನ್ನು ನಾವು ವಿಚಾರಿಸಿರುವುದಿಲ್ಲ. 2 ನೇ ಅರ್ಜಿದಾರರು ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಾರೆಂದು ನನಗೆ

ಖುದ್ದು ಮಾಹಿತಿ ಇಲ್ಲ. 1ನೇ ಎದುರುದಾರರ ಚಾಲನಾ ಪರವಾನಿಗೆ ಹೊಂದಿರುವುದಿಲ್ಲ ಎಂದು ನಮ್ಮ ಸಂಸ್ಥೆಯ ತನಿಖೆಯಿಂದ ತಿಳಿದು ಬಂದಿರುತ್ತದೆ. ಅಪಘಾತಪಡಿಸಿದ ವಾಹನವು ಅಪಘಾತ ಕಾಲಕ್ಕೆ ವಿಮೆಗೆ ಒಳಪಟ್ಟಿತ್ತು ಎಂದರೆ ಸರಿ. ಮೃತ ವ್ಯಕ್ತಿಯು ಅಪಘಾತ ಪಡಿಸಿದ ವಾಹನದ ಮೂರನೇ ವ್ಯಕ್ತಿಯಾಗಿರುವುದರಿಂದ ನಮ್ಮ ಸಂಸ್ಥೆಯು ಪರಿಹಾರ ಕೊಡಲು ಬಾದ್ಯಸ್ಥರಾಗಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ. ಜಿ.ಆರ್. ವಕೀಲರಿಂದಃ</u>**

ಸಾಕ್ಷಿಗೆ ಸದಾನಂದರವರರಿಗೆ ಸೇರಿದೆ ಎನ್ನಲಾದ ನೋಟರೈಸ್ಡ್ ಡಿಎಲ್ ಅನ್ನು ತೋರಿಸಿ, 1ನೇ ಎದುರುದಾರರು ಅಪಘಾತ ಕಾಲಕ್ಕೆ ವಾಹನ ಪರವಾನಿಗೆ ಹೊಂದಿರುತ್ತಾರೆ ಎಂದು ಸೂಚಿಸಿದರೆ ಸಾಕ್ಷಿ ಅದನ್ನು ನಾನು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು 1ನೇ ಎದುರುದಾರರು ಹಾಜರುಪಡಿಸಲಾಗಿದ್ದರೂ ಸಹ ಪೋಲೀಸರು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**